

ಸರ್ವೇಯ ವಿವಿಧ ಹಂತಗಳು

ಸಫಲರಾಗಿದ್ದರು. ಇದು ನಿಜವಾದ ಅರ್ಥದಲ್ಲಿ 'ಶೃಂಗ'ಸಭೆ. ಅದನ್ನೇ ನೇಪಾಳ ಪಾಲಿಸಿತ್ತು ಕೂಡ.

## ಮಹಾ ಮೋಜಣಿ

ಒಂದರಘಳಿಗೆ ನಿಮ್ಮ ಶಾಲಾ ದಿನಗಳನ್ನು ನೆನಪಿಸಿಕೊಳ್ಳಿ. ನಿಮ್ಮ ಸ್ನೇಹಿತರಲ್ಲಿ ಯಾರೋ ಒಬ್ಬ ಕಿಲಾಡಿ ನಿಮ್ಮ ಬುದ್ಧಿವಂತಿಕೆಯನ್ನು ಅಳೆಯಲು ಒಂದು ಪ್ರಶ್ನೆ ಕೇಳುತ್ತಾನೆ: 'ಒಂದು ಕೆ.ಜಿ. ಕಬ್ಬಿಣ ಹೆಚ್ಚು ತೂಕವೋ ಅಥವಾ ಒಂದು ಕೆ.ಜಿ. ಹತ್ತಿ ಹೆಚ್ಚು ತೂಕವೊ?' ಎಂದು. ಬಹಳಷ್ಟು ಬಾಲಕರು ಹಿಂದು ಮುಂದು ನೋಡದೆ 'ಇದೆಂಥ ಪ್ರಶ್ನೆ' ಎಂದು ನಕ್ಕು 'ಒಂದು ಕೆ.ಜಿ. ಕಬ್ಬಿಣವೇ ಭಾರ' ಎಂದು ಹೇಳುತ್ತಿದ್ದರಲ್ಲವೆ? ಕಬ್ಬಿಣ ಭಾರ, ಹತ್ತಿ ಹಗುರ ಎಂದು ತಲೆಯಲ್ಲಿ ಕೂತುಬಿಟ್ಟಿರುತ್ತದೆ. ಒಂದು ಕೆ.ಜಿ. ಕಬ್ಬಿಣಕ್ಕೆ ಸಮನಾದ ಹತ್ತಿಯನ್ನು ತೂಗಬೇಕೆಂದರೆ ಹತ್ತಿಯ ಗಾತ್ರ ದೊಡ್ಡದಾಗಿರುತ್ತದೆ ಎಂಬ ಪ್ರಾಥಮಿಕ ತಿಳಿವಳಿಕೆ ಉತ್ತರಿಸುವಾಗ ಮರೆತುಹೋಗಿಬಿಡುತ್ತದೆ. ಈ ಎರಡೂ ಒಂದೇ ಎಂದು ಆ ಕಿಲಾಡಿ ಉತ್ತರಿಸಿದಾಗ, ಪೆಚ್ಚಾಗುವುದಕ್ಕಿಂತ ನಕ್ಕುಬಿಡುವ ಸಂದರ್ಭವೇ ಹೆಚ್ಚಾಗಿತ್ತು ತಾನೆ? ಹೌದು, ಈ ಜೋಕ್‌ಗೂ ಹಿಮಾಲಯದ ಪರ್ವತಗಳಿಗೂ ಸಂಬಂಧವಿದೆ.

ಬ್ರಿಟಿಷರು ಭಾರತದಲ್ಲಿ ಆಳುವಾಗ ದೊಡ್ಡ ಪ್ರಮಾಣದಲ್ಲಿ ಸಂಪನ್ಮೂಲ ಲೂಟಿಮಾಡಿದ್ದು ಚರಿತ್ರೆ ಬಲ್ಲ ಎಲ್ಲರಿಗೂ ಗೊತ್ತು. ಆದರೂ ಈ ಮಧ್ಯೆ ಒಂದಷ್ಟು ಒಳ್ಳೆಯ ಕೆಲಸಗಳನ್ನೂ ಮಾಡಿದ್ದರು.



ಸರ್ವೇಯ ವಿವಿಧ ಹಂತಗಳು

## ಸಾಮಾನ್ಯರಿಗೆ ಗಗನಕುಸುಮ

ಎವರೆಸ್ಟ್ ಶಿಖರ ಹತ್ತಲು ಎರಡು ಮಾರ್ಗಗಳಿವೆ. ಪರ್ವತಾರೋಹಿಗಳಿಗೆ ಈ ಎರಡೂ ಪರಿಚಿತವೇ. ನೇಪಾಳದ ಭಾಗದಿಂದ ವಾಯುವ್ಯ ಏಣಿ ಹಿಡಿದು ಹತ್ತುವುದು ಹೆಚ್ಚು ಜನಪ್ರಿಯವಾದ ಮಾರ್ಗ. ಅದು ಹೆಚ್ಚು ಕಡಿದಾಗಿಲ್ಲ ಕೂಡ. ಟಿಬೆಟಿನ ಭಾಗದಲ್ಲಿ ಉತ್ತರ ಏಣು ಹಿಡಿದು ಹತ್ತುವುದು ಇನ್ನೊಂದು. ಅದು ಕಡಿದು, ರಿಸ್ಕ್ ಇದ್ದೇ ಇರುತ್ತದೆ.

ಎವರೆಸ್ಟ್ ಏರಬೇಕೆಂದರೆ ಬರೀ ಬದುಕಿನ ಗುರಿಯಾಗಿದ್ದರೆ ಸಾಲದು. ಪರ್ಸ್ ಕೂಡ ದಪ್ಪವಾಗಿರಬೇಕು. ಈ ವಿಚಾರದಲ್ಲಿ ನೇಪಾಳ ಮತ್ತು ಚೀನಾ ಹತ್ತಿರ ಹತ್ತಿರ ಒಂದೇ ಪ್ಯಾಕೇಜ್ ರೂಪಿಸಿವೆ. ನೇಪಾಳ ಒಬ್ಬ ವ್ಯಕ್ತಿಗೆ ಇಡೀ ಯಾನದ ಸಂಪೂರ್ಣ ಖರ್ಚು ಎಂದು 38,000 ಸಾವಿರ ಡಾಲರ್ ವಿಧಿಸುತ್ತದೆ. ಅದೇ ಚೀನಾ 39,283 ಡಾಲರ್ ವಿಧಿಸುತ್ತದೆ. ಇದು ಈಗಿನ ದರ. ಈ ಖರ್ಚಿನಲ್ಲಿ ಗುರುತಿಸಿರುವ ಬಿಡಿ ಖರ್ಚುಗಳು ಆಶ್ಚರ್ಯ ತರುತ್ತವೆ. ನೇಪಾಳ ಪರ್ಮಿಟ್ ಕೊಡಲು ಪ್ರತಿ ಪರ್ವತಾರೋಹಿಗೆ 11,000 ಡಾಲರ್ ವಿಧಿಸುತ್ತದೆ. ಚೀನಾದ ಟಿಬೆಟ್ ಭಾಗದಿಂದ ಹತ್ತುವುದಾದರೆ, ನೇಪಾಳದಿಂದ ಒಬ್ಬ ಶೆರ್ಪನನ್ನು ಒದಗಿಸಲು 4,500 ಡಾಲರ್ ವಿಧಿಸುತ್ತದೆ, ಜೊತೆಗೆ 5,000 ಡಾಲರ್ ಠೇವಣಿ ಇಡಬೇಕು. ಒಂದುವೇಳೆ ಅಪಘಾತವಾಗಿ ಪರ್ವತಾರೋಹಿಯನ್ನು ರಕ್ಷಿಸಬೇಕೆಂದರೆ ಅದಕ್ಕೆ ಬೇರೆ ಶುಲ್ಕವಿದೆ.

ಎವರೆಸ್ಟ್ ಶಿಖರದಲ್ಲಿ ತ್ಯಾಜ್ಯವನ್ನು ಬಿಟ್ಟು ಅಲ್ಲಿನ ವಾತಾವರಣವನ್ನು ಮಾಲಿನ್ಯ ಮಾಡುವುದು ಹೆಚ್ಚುತ್ತಿದೆಯಾದ್ದರಿಂದ, ಅದನ್ನು ಸ್ವಚ್ಛಮಾಡಲು ಪ್ರತಿ ಪರ್ವತಾರೋಹಿಗೂ 1,500 ಡಾಲರ್ ವಿಧಿಸುತ್ತದೆ. ಆಕ್ಸಿಜನ್ ಇಲ್ಲದೆ ಎವರೆಸ್ಟ್ ಹತ್ತಿ ದಾಖಲೆ ಮಾಡಿದವರೂ ಉಂಟು. ಆದರೆ ಇದರಲ್ಲಿ ರಿಸ್ಕ್ ಹೆಚ್ಚಾಗಿರುತ್ತದೆ. ಸಾವು ಸಂಭವಿಸುವ ಸಾಧ್ಯತೆಯೇ ಹೆಚ್ಚು. ಪರ್ವತಾರೋಹಿಗಳು ಆಕ್ಸಿಜನ್ ಬಾಟಲನ್ನು ಒಯ್ಯಲೇಬೇಕು. ಪ್ರತಿ ಬಾಟಲಿಗೆ 550 ಡಾಲರ್ ಬೆಲೆ. ಪ್ರತಿ ವ್ಯಕ್ತಿಯು ಕನಿಷ್ಠ ಐದು ಬಾಟಲ್ ಒಯ್ಯಬೇಕು.

ಬಾಟಲನ್ನು ಮೂಗಿಗೆ ಸಂಪರ್ಕಿಸಲು ರೆಗ್ಯೂಲೇಟರ್ ಬೇಕಲ್ಲ! ಅದಕ್ಕೆಂದೇ ಪ್ರತ್ಯೇಕ ಶುಲ್ಕವಿದೆ. ಅದು 450 ಡಾಲರ್. ಹಾಗೆಯೇ ಮಾಸ್ಕ್‌ಗೂ 450 ಡಾಲರ್. ಗಗನಯಾತ್ರಿಗಳಂತೆ ಎವರೆಸ್ಟ್ ಆರೋಹಿಗಳು ಸುರಕ್ಷತೆಗೆಂದು ವಿಶಿಷ್ಟವಾದ ಬೂಟು, ಸೂಟು, ಹೆಲ್ಮೆಟ್ ಧರಿಸಲೇಬೇಕು. ಇಡೀ ಈ ಉಡುಪಿನ ಬೆಲೆ 7,000 ಡಾಲರ್.

ಈ ಎಲ್ಲ ಖರ್ಚನ್ನೂ ಲೆಕ್ಕಿಸದೆ 2019ರಲ್ಲಿ 872 ಮಂದಿ ಎವರೆಸ್ಟ್ ಶಿಖರದ ನೆತ್ತಿಯನ್ನು ಮುಟ್ಟಿ ಬದುಕು ಸಾರ್ಥಕ ಎಂದು ಸಂಭ್ರಮಪಟ್ಟರು. 2020ರಲ್ಲಿ ಕೋವಿಡ್–19 ಒಡ್ಡಿದ ಸಮಸ್ಯೆಯಿಂದಾಗಿ ಎವರೆಸ್ಟ್ ಹತ್ತಲು ಪರವಾನಗಿಯನ್ನು ನಿಲ್ಲಿಸಲಾಗಿತ್ತು.

ಎವರೆಸ್ಟ್ ಹತ್ತುವುದು ಎಂದರೆ ಬದುಕನ್ನೇ ಪಣವಾಗಿಡುವುದು. ಹಿಲರಿ ಮತ್ತು ತೇನ್‌ಸಿಂಗ್ 1953ರಲ್ಲಿ ಎವರೆಸ್ಟ್ ಮೊದಲ ಬಾರಿಗೆ ಶಿಖರವನ್ನು ಮೆಟ್ಟಿ ನಿಂತು ಜಾಗತಿಕ ಇತಿಹಾಸ ನಿರ್ಮಿಸಿದರು. ಇಂಥದೇ ಪ್ರಯತ್ನದಲ್ಲಿ ಈವರೆಗೆ 10,155 ಮಂದಿ ಯಶಸ್ವಿಯಾಗಿದ್ದಾರೆ. ಆದರೆ 306 ಮಂದಿ ಪ್ರಾಣತೆತ್ತಿದ್ದಾರೆ.